ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **15/2020**

| | | |
|---|---|---|
| ಹೆಸರು | ರಮೇಶ್ | ಸಿ.ಡಬ್ಲ್ಯೂ **- 1** |
| ತಂದೆಯ ಹೆಸರು | ಗೌಡಯ್ಯ | ಪಿ.ಡಬ್ಲ್ಯೂ **- 2** |
| ವಯಸ್ಸು | 64 ವರ್ಷ | |
| ಉದ್ಯೋಗ | ಎಲೆಕ್ಟ್ರೀಷಿಯನ್ | |
| ವಾಸ ಸ್ಥಳ | ಬೆಂಗಳೂರು | |

ಸಾಕ್ಷಿಗೆ ದಿನಾಂಕಃ 17.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ನನಗೆ ಚಾಸಾ 2 ರಿಂದ 11 ರವರ ಪರಿಚಯವಿದೆ. ಮೃತ ಮಾದೇಗೌಡರವರು ನನ್ನ ಸೋದರ ಮಾವ ಆಗಿರುತ್ತಾರೆ. ಮೃತ ಶಿವಣ್ಣರವರು ನನಗೆ ಚಿಕ್ಕಪ್ಪರವರಾಗಿತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿರುವುದಿಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಈಗ ನೋಡುತ್ತಿರುವ 02 ದಾಖಲೆಗಳಿಗೆ ಪೊಲೀಸರ ಕೋರಿಕೆ ಮೇರೆಗೆ ಠಾಣೆಯಲ್ಲಿ ಸುಮಾರು 6 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳು ದೂರು ಮತ್ತು ಮಹಜರ್ ಆಗಿದ್ದು, ಅವುಗಳನ್ನು ನಿಪಿ 7 ಮತ್ತು 8 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 7 ಎ ಮತ್ತು 8 ಎ ಎಂದು ಗುರುತಿಸಲಾಯಿತು. ನಿಪಿ 7 ಮತ್ತು 8 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ. ಈಗ ನೋಡುತ್ತಿರುವ ನಿಪಿ 5 ಫೋಟೋದಲ್ಲಿ ನನ್ನ ಭಾವಚಿತ್ರ ಇದ್ದು, ಸದರಿ ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಆರೋಪಿಯನ್ನು ಈ ಹಿಂದೆ ನೋಡಿರುವುದಿಲ್ಲ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ

ದಿ: 13.09.2019 ರಂದು ಮದ್ಯಾಹ್ನ 2 ಗಂಟೆಯ ಸಮಯದಲ್ಲಿ ನೆಲಮಾಕನಹಳ್ಳಿ ಗೇಟ್ ನೇರದ ಮಳವಳ್ಳಿ ಮದ್ದೂರು ರಸ್ತೆಯಲ್ಲಿ ಕೆಎ-11-ಆರ್-6721 ನಂಬರ್‌ನ ಬೈಕ್‌ನಲ್ಲಿ ಮಾದೇಗೌಡ ಎಂಬುವವರನ್ನು ಚಾಸಾ 4 ರವರು ಕೂರಿಸಿಕೊಂಡು ಚಾಲಾನೆ ಮಾಡಿಕೊಂಡು ಹೋಗುತ್ತಿದ್ದಾಗ ನಾನು ಮತ್ತು ಚಾಸಾ 3 ರವರು ನಮಗೆ ಸೇರಿದ ಮೋಟಾರ್ ಬೈಕ್‌ನಲ್ಲಿ ಬರುತ್ತಿದ್ದಾಗ ಆರೋಪಿಯು ಕೆಎ-06-ಎಎ-5668 ನಂಬರ್‌ನ

ಬುಲೇರೋ ಗೂಡ್ಸ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ 4 ರವರು ಚಾಲನೆ ಮಾಡುತ್ತಿದ್ದ ಬೈಕ್‌ಗೆ ಡಿಕ್ಕಿ ಪಡಿಸಿ, ಅಪಘಾತ ಉಂಟು ಮಾಡಿದ್ದು, ಇದರಿಂದ ಬೈಕ್‌ನಲ್ಲಿದ್ದ ಮಾದೇಗೌಢರವರು ಮತ್ತು ಚಾಸಾ 4 ರವರು ಕೆಳಗೆ ಬಿದ್ದು, ಮಾದೇಗೌಡರವರು ಸ್ಥಳದಲ್ಲಿಯೇ ಮೃತರಾಗಿದ್ದು, ಸದರಿ ಅಪಘಾತಕ್ಕೆ ಆರೋಪಿಯು ಕಾರಣವೆಂದು ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿ ನಿಪಿ 7 ರಂತೆ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದೂರಿನ ಸಂಬಂಧವಾಗಿ ಪೊಲೀಸರು ದಿ: 13.09.2019 ರಂದು ಸಂಜೆ 4-30 ರಿಂದ 6 ಗಂಟೆಯ ಅವಧಿಯಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ 5 ಮತ್ತು 6 ರವರ ಸಮಕ್ಷಮ ಸ್ಥಳ ಮಹಜರ್ ನ್ನು ನಿಪಿ 8 ರಂತೆ ಜರುಗಿಸಿ, ನಿಪಿ 5 ಫೋಟೋವನ್ನು ತೆಗೆಸಿ, ಅಪಘಾತ ಪಡಿಸಿದ ಮತ್ತು ಅಪಘಾತಕ್ಕೆ ಒಳಗಾದ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಲಾದಂತೆ ನಾನು ಪೊಲೀಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ 9 ಎಂದು ಗುರುತಿಸಲಾಯಿತು. ಎಲ್ಲಾ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃಆರೋಪಿ ಪರ: ವಕೀಲರಿಂದ</u>

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.